ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 977(1026)
ಸದಸ್ಯರ ಹೆಸರು : ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 21/09/2021
ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
1	ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿರುವ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ವ್ಯಾಪ್ತಿಯಲ್ಲಿ ಇರುವ ಸರ್ಕಾರಿ / ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ, ಪಿ.ಯು.ಸಿ ಶಿಕ್ಷಣ ಸಂಸ್ಥೆಗಳಿಗೆ ಅಭಿವೃದ್ಧಿ ಕುರಿತು ಆಯಾ ಸಂಸ್ಥೆಗಳು ತೆಗೆದುಕೊಂಡ ಕಾರ್ಯ ಹಾಗೂ ಕಾಮಗಾರಿಗಳು ಯಾವುವು; (ತಾಲ್ಲೂಕುವಾರು ವಿವರ ನೀಡುವುದು)	ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳು ಶಿಕ್ಷಣ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರ ಅನುಬಂಧದಲ್ಲಿ ಲಗತ್ತಿಸಿದೆ.
2	ಈ ಸ್ಥಳೀಯ ಸಂಸ್ಥೆಗಳಲ್ಲಿರುವ ಪ್ರತಿ ಶಾಲೆಗಳಲ್ಲಿರುವಂತಹ ಮೂಲಭೂತ ಸೌಕರ್ಯಗಳ ಕೊರತೆಗಳೇನು; ಇಂತಹ ಶಿಕ್ಷಣ ಸಂಸ್ಥೆಗಳನ್ನು ನಿರ್ವಹಿಸಲು ಪೌರಡಾಳಿತ ಇಲಾಖೆಯ ಯೋಜನೆಗಳೇನು?	ಪೌರಾಡಳಿತ ಶಿಕ್ಷಣ ಸಂಸ್ಥೆಗಳ ಸೌಕರ್ಯಗಳ ಕುರಿತು ಪೌರಾಡಳಿತ ಇಲಾಖೆಯಿಂದ ನಿರ್ದಿಷ್ಟ ಯೋಜನೆ ಇರುವುದಿಲ್ಲ. ನಗರ ಸ್ಥಳೀಯ ಸಂಸ್ಥೆಗಳು ಸ್ವಂತ ನಿಧಿ/ಸರ್ಕಾರದ ವಿವಿಧ ಅನುದಾನಗಳಲ್ಲಿ ಕೌನ್ಸಿಲ್ ನಿರ್ಣಯದಂತೆ ಅಗತ್ಯ ಸೌಕರ್ಯಗಳನ್ನು ಒದಗಿಸುತ್ತಾರೆ.

ಸಂಖ್ಯೆ: ನಅಇ 199 ಜಿಇಎಲ್ 2021(ಇ)

ಎನ್. ನಾಗರಾಜು (ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಅನುಬಂಧ - 01

(ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಮಾಹಿತಿ)

ವಿಷಯ: ಶ್ರೀ ಎಸ್. ರವಿ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 977 (1026) ಕ್ಕೆ ಉತ್ತರಿಸುವ ಬಗ್ಗೆ.

)	ವಿಷಯ	ಜಿಲ್ಲೆಯ ಹೆಸರು	ನಗರಸಭೆ, ರಾಮನಗರ	ನಗರಸಭೆ, ಚನ್ನಪಟ್ಟಣ	ನಗರಸಭೆ, ಕನಕಪುರ	ಪುರಸಭೆ, ಮಾಗಡಿ	ಪುರಸಭೆ, ಬಿಡದಿ	ಪಟ್ಟಣ ಪಂಚಾಯಿತಿ ಹಾರೋಹಳ್ಳಿ
	ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿರುವ ಪಟ್ಟಣ ಪಂಚಾಯಿತ್ತಿ, ಪುರಸಭೆ, ನಗರಸಭೆ ವ್ಯಾಪ್ತಿಯಲ್ಲಿ ಇರುವ ಸರ್ಕಾರಿ/ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ, ಪಿ.ಯು.ಸಿ ಶಿಕ್ಷಣ ಸಂಸ್ಥೆಗಳಿಗೆ ಅಭಿವೃದ್ಧಿ ಕುರಿತು ಆಯಾ ಸಂಸ್ಥೆಗಳು ತೆಗೆದುಕೊಂಡ ಕಾರ್ಯ ಹಾಗೂ ಕಾಮಗಾರಿಗಳು ಯಾವುವು: (ತಾಲ್ಲೂಕುವಾರು ವಿವರ ನೀಡುವುದು)	ರಾಮನಗರ ಜಿಲ್ಲೆ	ಇಲ್ಲ	ಇಲ್ಲ	ಜಾರು ಹಾದಿ (Ramp) ಹಾಗೂ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಕಾಮಗಾರಿಗಳನ್ನು ಕೈಗೊಳಲಾಗಿದೆ.	ಇಲ್ಲ	ಇಲ್ಲ	ಇಲ್ಲ
			ದೊಡ್ಡಬಳ್ಳಾಪುರ ನಗರಸಭೆ	ಹೊಸಕೋಟೆ ನಗರಸಭೆ	ನೆಲಮಂಗಲ ನಗರಸಭೆ	ದೇವನಹಳ್ಳಿ ಪುರಸಭೆ	ವಿಜಯಪುರ ಪುರಸಭೆ	ಚಾಕಿಟ್ಟಹಳ್ಳಿ ಪಟ್ಟಣ ಪಂಚಾಯಿತಿ
		ಬೆಂಗಳೂರು ಗ್ರಾಮಾಂತರ ಜಿಲ್ಲೆ	ಇಲ್ಲ	1)ಜಿ.ಕೆ.ಬಿ.ಎಂ ಸರ್ಕಾರಿ ಶಾಲೆಯಲ್ಲಿ ಮೊತ್ತ ರೂ. 2.22 ಲಕ್ಷಗಳ ಅನುದಾನದಲ್ಲಿ ಶೌಚಾಲಯ ನಿರ್ಮಿಸಿಕೊಡಲಾಗಿದೆ. 2)ಸಿದ್ಧಾರ್ಥನಗರ ಪ್ರಾರ್ಥಮಿಕ ಶಾಲೆಯಲ್ಲಿ ಮೊತ್ತ ರೂ. 2.75 ಲಕ್ಷಗಳ ಅನುದಾನದಲ್ಲಿ ಶೌಚಾಲಯ ನಿರ್ಮಿಸಿಕೊಡಲಾಗಿದೆ. 3)ವಿವೇಕಾನಂದ ಪ್ರಾರ್ಥಮಿಕ ಶಾಲೆಯಲ್ಲಿ ವಿಶೇಷ ಚೇತನರಿಗಾಗಿ ಶೌಚಾಲಯವನ್ನು ಮೊತ್ತ ರೂ. 1.20 ಲಕ್ಷಗಳ ಅನುದಾನದಲ್ಲಿ ನಿರ್ಮಿಸಿಕೊಡಲಾಗಿದೆ. 4)ವರದಾಪುರ ಪ್ರಾರ್ಥಮಿಕ ಶಾಲೆಯಲ್ಲಿ ಮೊತ್ತ ರೂ. 2.10 ಲಕ್ಷಗಳ ಅನುದಾನದಲ್ಲಿ ಶೌಚಾಲಯ ನಿರ್ಮಿಸಿಕೊಡಲಾಗಿದೆ.	1) ಒಂದು ಪ್ರಾಥಮಿಕ ಶಾಲೆಗೆ ಮಕ್ಕಳು ಕುಳಿತು ಊಟ ತಿಂಡಿ ಮಾಡಲು ಶೆಡ್ ನಿರ್ಮಾಣ ಕಾಮಗಾರಿಯನ್ನು ಮಾಡಲಾಗಿದೆ. 2) ಒಂದು ಪ್ರಾಥಮಿಕ ಶಾಲೆಯ ಕಾಂಪೌಂಡ್ ನಿರ್ಮಾಣ ಸುಣ್ಣ ಬಣ್ಣ ಬಳಿಯುವ ಕಾಮಗಾರಿ ಮಾಡಲಾಗಿದೆ. 3) ಒಂದು ಪ್ರಾಥಮಿಕ ಶಾಲೆಯ ಮೇಲ್ಛಾವಣಿಗೆ ಚುರ್ಕಿ ಹಾಕುವ ಕಾಮಗಾರಿ ಮಾಡಲಾಗಿದೆ. 4) ಒಂದು ಮಾಧ್ಯಮಿಕ ಶಾಲೆಗೆ ಶೌಚಾಲಯ ನಿರ್ಮಾಣ ಕಾಮಗಾರಿ ಮಾಡಲಾಗಿದೆ.	ಇಲ್ಲ	ಇಲ್ಲ	ಇಲ್ಲ

ತಮ್ಮ ವಿಶ್ವಾಸಿ

ಜಂಟಿ ನಿರ್ದೇಶಕರು (ಅಭಿವೃದ್ಧಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು